ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಸೆಂಟ್ರಲ್‌ಕಾಲೇಜುಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ:ಬೆಂ.ನ.ವಿ./ಕು.ಸ.ಆ/ಮತದಾನ/2022–23 ದಿನಾಂಕ: 05–01–2023

**ನೆನಪೋಲೆ–1**

**ಸುತ್ತೋಲೆ**

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ/ಸ್ವಾಯತ್ತ ಕಾಲೇಜುಗಳಲ್ಲಿ ಮತದಾನ ಸಾಕ್ಷರತಾ ಸಂಘ (Electoral Literacy Club) ಕಾರ್ಯಚಟುವಟಿಕೆಗಳನ್ನು ಅನುಷ್ಠಾನ ಮತ್ತು ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಒದಗಿಸುವ ಬಗ್ಗೆ.

**ಉಲ್ಲೇಖ:**
1. ಮುಖ್ಯ ಚುನಾವಣಾಧಿಕಾರಿ ರವರ ಕಛೇರಿ– ಕರ್ನಾಟಕ ರವರ ಸುತ್ತೋಲೆ ಸಂಖ್ಯೆ:ಸಿಆಸುಇ/13/SVEEP/2022, ದಿನಾಂಕ: 29.06.2022 ಮತ್ತು 01.09.2022.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಬೆಂ.ನ.ವಿ/ಕು.ಸ.ಆ/ಮತದಾನ/2022–23 ದಿನಾಂಕ: 08.12.2022.
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅವರ ಪತ್ರ ಸಂಖ್ಯೆ: ವಿಆ(ಚುನಾವಣೆ)/ಪಿಆರ್/07/22–23 ದಿನಾಂಕ: 04.01.2023

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಭಾರತ ಚುನಾವಣಾ ಆಯೋಗದ ಆದೇಶ ಹಾಗೂ ಮಾರ್ಗ ಸೂಚಿಗಳನ್ವಯ ಮತದಾರ ಸಾಕ್ಷರತಾ ಸಂಘ (Electoral Literacy Club) ಗಳನ್ನು ಪ್ರಾರಂಭಿಸಿ ಯುವ ಮತದಾರರಲ್ಲಿ ಮತದಾನದ ಅರಿವು, ಮತದಾನದ ನೊಂದಣಿ ಮತ್ತು ಹಕ್ಕಿನ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಿ ಕಾರ್ಯರೂಪಕ್ಕೆತರಲು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಸಂಯೋಜಿತ/ಸ್ವಾಯತ ಕಾಲೇಜಿನ ಪ್ರಾಂಶುಪಾಲರು ಸೂಕ್ತ ಕ್ರಮಕೈಗೊಳ್ಳಲು ಉಲ್ಲೇಖ (2)ರ ವಿಶ್ವವಿದ್ಯಾನಿಲಯದ ಪತ್ರದಲ್ಲಿ ಸೂಚಿಸಲಾಗಿದೆ.

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಸಂಯೋಜಿತ/ಸ್ವಾಯತ ಕಾಲೇಜುಗಳು ಇದುವರೆವಿಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾಲೇಜುಗಳಲ್ಲಿ (Electoral Literacy Club) ಸಂಘಗಳನ್ನು ಪ್ರಾರಂಭಿಸಿರುವ ಬಗ್ಗೆ ಹಾಗೂ 18 ವರ್ಷ ತುಂಬಿದ ವಿದ್ಯಾರ್ಥಿಗಳ ಮಾಹಿತಿಯನ್ನು ಚುನಾವಣಾ ಆಯೋಗದ ನಮೂನೆ–1ರಲ್ಲಿ update ಮಾಡುವುದ ಹಾಗೂ ಮಾಹಿತಿ ಅಧಿಕೃತವಾಗಿ ಒದಗಿಸುವುದರಲ್ಲಿ ವಿಫಲವಾಗಿರುವುದು ತಿಳಿದು ಬಂದಿದೆ ಎಂದು ಉಲ್ಲೇಖ(3)ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅವರ ತಿಳಿಸಿರುತ್ತಾರೆ.

ಮುಂದುವರೆದು, ಪ್ರಸುತ್ತ ಆಯಾಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿರುವ ಬಗ್ಗೆ ಖಾತ್ರಿ ಪಡಿಸುವುದು ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡಿಸುವ ಸಲುವಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿ update ಮಾಡುವುದು ಹಾಗೂ ವಿದ್ಯಾರ್ಥಿಗಳ ಹೆಸರು ಇತರೆ ಮಾಹಿತಿ, ಕಾಲೇಜು/ಸಂಸ್ಥೆಗಳಲ್ಲಿ ಮುಖ್ಯಸ್ಥರ ಹೆಸರು ಸಹಿ ಮತ್ತು ಮೊಹರಿನೊಂದಿಗೆ ಕೂಡಲೇ ಮಾಹಿತಿಯನ್ನು ಮರು ಟಪಾಲುನಲ್ಲಿ ಇಮೇಲ್ ಮುಖಾಂತರ sc-election@bbmp.gov.in sveep-bbmp@bbmp.gov.in & registrarbcu@gmail.com ಕ್ಕೆ ಕಳುಹಿಸಿಕೊಡಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಜನಪ್ರತಿನಿದಿ ಕಾಯ್ದೆಯನ್ವಯ ನಿಯಮಾನುಸಾರ ಕ್ರಮವಹಿಸಲಾಗುವುದು.

**ಕುಲಸಚಿವರು**

ಗೆ,

**ಎಲ್ಲಾ ಪ್ರಾಂಶುಪಾಲರುಗಳು,**
ಬೆಂಗಳೂರು ನಗರ ವಿಶ್ವವಿದ್ಯಾನಿಲಯದ
ಸಂಯೋಜಿತ/ಸ್ವಾಯತ್ತ ಕಾಲೇಜುಗಳು,
ಬೆಂಗಳೂರು.

ಪ್ರತಿ/ಗಳು:

1. ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ ವಿತ್ತಾಧಿಕಾರಿಗಳ ಆಪ್ತ-ಸಹಾಯಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
2. ವಿಶ್ವವಿದ್ಯಾನಿಲಯಜಾಲತಾಣದಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ / ರಕ್ಷಾಕಡತ.